**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ಕರ್ನಾಟಕ ಗೃಹ ಮಂಡಳಿ, ಬಿಡಿಎ ವತಿಯಿಂದ ಸಾವಿರಾರು ಜನರು ಅರ್ಜಿ ಸಲ್ಲಿಸಿ ಹಣ ಪಾವತಿಸಿ ನಿವೇಶನ ಪಡೆದಿದ್ದು, ಅವರಿಗೆ ಇನ್ನೂ ನೋಂದಣಿ ಸಂಬಂಧ ಕ್ರಯಪತ್ರ ಸಿದ್ಧಪಡಿಸಿ ಕೊಟ್ಟಿಲ್ಲ. ಬೆಂಗಳೂರು ಒಂದರಲ್ಲೇ ಇಂಥ ನಾಲ್ಕೈದು ಸಾವಿರ ಕುಟುಂಬಗಳಿವೆ. ಕರ್ನಾಟಕದ ಇತರ ಕಡೆಗಳಲ್ಲಿ ಮೂರ್ನಾಲ್ಕು ಸಾವಿರ ಕುಟುಂಬಗಳಿಗೆ ಒಟ್ಟು 8-9 ಸಾವಿರ ಕುಟುಂಬಗಳಿಗೆ ಹಣ ಪಡೆದರೂ ನೋಂದಣಿ ಸಂಬಂಧ ಕ್ರಯಪತ್ರ ಸಿದ್ಧಪಡಿಸಿ ಕೊಟ್ಟಿರುವುದಿಲ್ಲ. ನೋಂದಣಿ ಸಂಬಂಧ ಜನರು ಅಲೆದಾಡುವ ಪರಿಸ್ಥಿತಿ ಇರುವುದರ ಕುರಿತು ಕೂಡಲೇ ಸಮಸ್ಯೆ ಪರಿಹಾರ ಮಾಡಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ.

**ಉತ್ತರ :**

**ಕರ್ನಾಟಕ ಗೃಹ ಮಂಡಳಿ** :-

ಕರ್ನಾಟಕ ಗೃಹ ಮಂಡಳಿಯು ರಾಜ್ಯಾದ್ಯಂತ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ಅರ್ಹ ಅರ್ಜಿದಾರರಿಗೆ ಮಂಡಳಿ ನಿಯಮಾವಳಿಯಂತೆ ಲಾಟರಿ ಮುಖಾಂತರ ಆರ್ಥಿಕ ದುರ್ಬಲ ವರ್ಗದ ನಿವೇಶನಗಳು ಸೇರಿ ಮಧ್ಯಂತರ ನಿವೇಶನಗಳನ್ನು ಪ್ರವರ್ಗವಾರು ಹಂಚಿಕೆ ಮಾಡಲಾಗುತ್ತಿದೆ. ಸದರಿ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಹಂಚಿಕೆದಾರರಿಗೆ ಹಂಚಿಕೆ ಪತ್ರಗಳನ್ನು ವಿತರಿಸಿ ಹಂಚಿಕೆಯಾದ ಸ್ವತ್ತುಗಳ ಬಾಬ್ತು ಮಂಡಳಿಗೆ ಹಣ ಪಾವತಿಸಲು 4 ತಿಂಗಳ ಕಾಲಾವಕಾಶ ನೀಡಲಾಗುತ್ತದೆ.

ಹಂಚಿಕೆದಾರರು ಮಂಡಳಿಗೆ ಹಣ ಪಾವತಿಸಿದ ನಂತರ ಹಂಚಿಕೆದಾರರಿಂದ ಸೂಕ್ತ ದಾಖಲೆಗಳನ್ನು ಪಡೆದು ಮಂಡಳಿಯಿಂದ ಕ್ರಯಪತ್ರ ವಿತರಿಸಲಾಗುತ್ತದೆ. ಅದರಂತೆ ಮಂಡಳಿಗೆ ಸ್ವತ್ತುಗಳ ಪೂರ್ಣ ಬೆಲೆಯನ್ನು ಪಾವತಿಸಿರುವ ಬಹುತೇಕ ಹಂಚಿಕೆದಾರರಿಗೆ ಸ್ವತ್ತುಗಳ ಕ್ರಯಪತ್ರಗಳನ್ನು ನೀಡಲಾಗಿರುತ್ತದೆ. ಆದರೆ ಹೊಸದಾಗಿ ಅಭಿವೃದ್ಧಿಪಡಿಸಿರುವ ಕೆಲವು ಬಡಾವಣೆಗಳ ಮಂಡಳಿಯ ಸ್ವತ್ತುಗಳಿಗೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ಇ-ಸ್ವತ್ತು (ಇ-ಖಾತಾ) ನೀಡಲು ವಿಳಂಬವಾಗುತ್ತಿರುವುದರಿಂದ ಕ್ರಯಪತ್ರ ಮಾಡಿಕೊಡಲು ತಡವಾಗುತ್ತಿದೆ. ಈ ಸಂಬಂಧ ಈಗಾಗಲೇ ಸ್ಥಳೀಯ ಸಂಸ್ಥೆಗಳನ್ನು ಸಂಪರ್ಕಿಸಿ ಇ-ಸ್ವತ್ತು(ಇ-ಖಾತಾ) ತುರ್ತಾಗಿ ನೀಡುವಂತೆ ಕೋರಲಾಗಿರುತ್ತದೆ. ಇ-ಖಾತಾ ಲಭ್ಯವಾದ ತಕ್ಷಣ ಕ್ರಯಪತ್ರಗಳ ನೋಂದಣಿಗೆ ಕ್ರಮ ಕೈಗೊಳ್ಳಲಾಗುವುದು.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ** :-

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ನಿವೇಶನ ಹಂಚಿಕೆ) ನಿಯಮಗಳು, 1984 ರ ನಿಯಮ 9 ರನ್ವಯ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ ಜೇಷ್ಠತೆ ಹಾಗೂ ಪ್ರವರ್ಗವಾರು ಮೀಸಲಾತಿಯನ್ನು ಪರಿಗಣಿಸಿ, ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ.

ಹಂಚಿಕೆಯಾದ ನಿವೇಶನದ ಪೂರ್ಣ ಮೌಲ್ಯವನ್ನು ಹಂಚಿಕೆದಾರರು ನಿಗದಿತ ಅವಧಿಯಲ್ಲಿ ಪಾವತಿಸಿದ ಪ್ರಕರಣಗಳಲ್ಲಿ 10 ವರ್ಷಗಳ ಅವಧಿಗೆ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ನೋಂದಾಯಿಸಿದ ನಂತರ ನಿವೇಶನದ ಸ್ವಾಧೀನ ಪತ್ರವನ್ನು ನೀಡಲಾಗುತ್ತಿದೆ.

ನಿಗದಿತ ಗುತ್ತಿಗೆ ಅವಧಿಯು ಮುಗಿದ ನಂತರ ಗುತ್ತಿಗೆ ಷರತ್ತುಗಳ ಪಾಲನೆಯ ಅಂಶವನ್ನು ಪರಿಶೀಲಿಸಿಕೊಂಡು ಹಂಚಿಕೆದಾರರ ಕೋರಿಕೆಯ ಮೇರೆಗೆ ಕ್ರಯಪತ್ರವನ್ನು ನೋಂದಾಯಿಸಲು ಕ್ರಮವಹಿಸಲಾಗುತ್ತಿದೆ.

ಗುತ್ತಿಗೆ ಅವಧಿಯಲ್ಲಿಯೇ ನಿವೇಶನ ಮಾರಾಟವಾಗಿರುವ ಪ್ರಕರಣಗಳಲ್ಲಿ ಖರೀದಿದಾರರು ಶುದ್ಧಕ್ರಯ ಪತ್ರವನ್ನು ನೀಡುವಂತೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ನಿವೇಶನ ಹಂಚಿಕೆ) ನಿಯಮಗಳು, 1984 ರ ನಿಯಮಗಳ ತಿದ್ದುಪಡಿಯ ಬಗ್ಗೆ ಸರ್ಕಾರದ ಹಂತದಲ್ಲಿ ವಿಷಯವು ಪರಿಶೀಲನೆಯಲ್ಲಿರುತ್ತದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಹಾಗೂ ಅರ್ಕಾವತಿ ಬಡಾವಣೆಯಲ್ಲಿ ಅಭಿವೃದ್ಧಿ ಪಡಿಸಿದ ರೂಪದಲ್ಲಿ ಭೂಪರಿಹಾರವನ್ನು ಪಡೆಯುವ ಭೂಮಾಲೀಕರಿಗೆ ನೇರವಾಗಿ ಶುದ್ಧಕ್ರಯ ಪತ್ರವನ್ನು ನಿಡಲಾಗುತ್ತಿದೆ.

(ಸಂಖ್ಯೆ : ವಇ 187 ಕೆಹೆಚ್‌ಬಿ 2023)

B. Zameer Ahmed Khan

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು